# ವಿಶ್ವಾತ್ಮಕ ದೃಶ್ಯಕಲೆಯ ವಿಶಿಷ್ಟ ಪಕ್ಷಿನೋಟ



**ಚಿದಾನಂದ ಸಾಲಿ**

ಕವಿ, ಕಥೆಗಾರ ಲಕ್ಷ್ಮಣ ಬಾದಾಮಿ ಅವರ 'ಮಾತಿಗಳಿದ ಚಿತ್ರ'ವು ಚಿತ್ರಕಲಾ ಮಾಧ್ಯಮದ ಇಪ್ಪತ್ನಾಲ್ಕು ಕಲಾಪಂಥಗಳಿಗೆ ಸಂಬಂಧಿಸಿದ, ಹದಿನೆಂಟು ದೇಶಗಳ ವಿವಿಧ ಕಲಾವಿದರ, ಒಟ್ಟು ಮೂವತ್ತು ಕಲಾಕೃತಿಗಳನ್ನು ಕುರಿತು ಬರೆದಿರುವ ಬರಹಗಳನ್ನು ಒಳಗೊಂಡಿದೆ. ಅಲ್ಲದೆ ಅನುಬಂಧದಲ್ಲಿ ಬೇರೆ ಮೂರು ಲೇಖನಗಳನ್ನೂ ಒಳಗೊಂಡಿದ್ದು ಅವುಗಳಲ್ಲಿ ಒಂದು ಲೇಖನವು ಎರಡು ಶಿಲ್ಪಗಳಿಗೆ ಸಂಬಂಧಿಸಿದ; ಉಳಿದೆರಡು ಲೇಖನಗಳು ಇಬ್ಬಿಬ್ಬರು ಕಲಾವಿದರ ಶೈಲಿಗಳಿಗೆ ಸಂಬಂಧಿಸಿದ ತೌಲನಿಕ ಲೇಖನಗಳಾಗಿವೆ.

ಸಾಹಿತ್ಯದಲ್ಲಿರುವ ನವೋದಯ, ನವ್ಯ, ಪ್ರಗತಿಶೀಲ, ಬಂಡಾಯ, ದಲಿತ ಪಂಥಗಳಂತೆ; ಚಿತ್ರಕಲಾ ಕ್ಷೇತ್ರದಲ್ಲಿರುವ ಪಂಥಗಳ ಕುರಿತು, ಅವುಗಳ ಮಿತಿ-ಮಹತ್ವ-ಲಕ್ಷಣಗಳ ಕುರಿತು ಸೋದಾಹರಣವಾಗಿ ಈ ಕೃತಿಯಲ್ಲಿ ವಿವರಿಸಲಾಗಿದೆ. ಪ್ರತಿಯೊಂದು ಶೈಲಿಯನ್ನು ಇಲ್ಲಿ 'ಪಂಥ' ಎಂಬ ಪದದ ಬದಲಿಗೆ, 'ಪಥ' ಎಂಬ ಪದವನ್ನು ಬಳಸಿ ವ್ಯಾಖ್ಯಾನಿಸಿರುವುದು ವ್ಯಕ್ತಿಗಿಂತ ಮಾರ್ಗಕ್ಕೆ ಮಹತ್ವ ನೀಡಿರುವುದನ್ನು ಸೂಚಿಸುವಂತಿದೆ. ಪ್ರತಿಯೊಂದು ಕಲಾಪಥದ ಒಬ್ಬೊಬ್ಬ ಕಲಾವಿದರನ್ನು ಚರ್ಚಿಸಲಾಗಿದ್ದರೂ; ರಿನೈಸಾನ್ಸ್, ಬಾರೋಕ್, ಫೋಟೊ ರಿಯಲಿಸಂ ಮತ್ತು ಇಂಡಿಯನ್ ಮಾಡರ್ನ್ ಆರ್ಟ್ ಪಥಗಳ ತಲಾ ಇಬ್ಬರು ಕಲಾವಿದರನ್ನು ಹಾಗೂ ಸರ್ರಿಯಲಿಸಂ ಪಥದ ಮೂವರು ಕಲಾವಿದರನ್ನು ಆಯ್ದುಕೊಂಡಿರುವುದು ಕುತೂಹಲಕ್ಕೆ ಎಡೆ ಮಾಡಿಕೊಡುವಂತಿದೆ.

ಕ್ಯೂಬಿಜಂ ಪಂಥದ ಮೊದಲ ಅಧಿಕೃತ ಕಲಾಕೃತಿಯನ್ನು ಚಿತ್ರಿಸಿದ ಜಗದ್ವಿಖ್ಯಾತ ಚಿತ್ರಕಾರ ಪಾಬ್ಲೋ ಪಿಕಾಸೋ ಅವರ ಉಲ್ಲೇಖವು, ಜೀನ್ ಮೆಟ್ಜಿಂಜರ್ ಕುರಿತ ಬರಹದಲ್ಲಿ ಹಾಗೂ 'ಭಾರತದ ಬರಿಗಾಲ ಪಿಕಾಸೋ' ಎಂದೇ ಖ್ಯಾತರಾಗಿದ್ದ ಎಂ.ಎಫ್. ಹುಸೇನ್ ಕುರಿತ ಬರಹದಲ್ಲಿ ಮಾತ್ರ ಬರುತ್ತದೆಂಬುದನ್ನು ಬಿಟ್ಟರೆ ಅವರ ಕುರಿತು ಪ್ರತ್ಯೇಕ ಬರಹವೇ ಇಲ್ಲ. ಎಕ್ಸ್‌ಪ್ರೆಶ್ಶನಿಸಂಗೆ ಸೇರಿಸಬಹುದಾದರೂ ಸಾಂಪ್ರದಾಯಿಕ ಭಾರತೀಯ ಮತ್ತು ಆಧುನಿಕ ಪಾಶ್ಚಾತ್ಯಗಳ ಎರಕದಂಥ ಅನನ್ಯ ಶೈಲಿಯಲ್ಲಿ ಚಿತ್ರಿಸಿದ ರವೀಂದ್ರನಾಥ ಟ್ಯಾಗೋರ್ ಹಾಗೂ ಮಾಡರ್ನ್ ಇಂಡಿಯನ್ ಆರ್ಟ್‌ನ ಪಿತಾಮಹರೆಂದೇ ಗುರುತಿಸಲ್ಪಟ್ಟ ಅವನೀಂದ್ರನಾಥ ಟ್ಯಾಗೋರ್‌ರ ಕುರಿತು ಕನಿಷ್ಠ ಪ್ರಾಸಂಗಿಕವಾದ ಉಲ್ಲೇಖಗಳೂ ಇಲ್ಲ. ಹಾಗೆಯೇ ಸರ್ರಿಯಲಿಸಂ ಪಥದ (ರೆನೆ ಮ್ಯಾಗ್ರಿತ್ ಮತ್ತು ಸಾಲ್ವಡಾರ್ ಡಾಲಿ) ಕುರಿತು